## ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಜನೂರು ಅಗ್ರಹಾರ ಶಿವಮೊಗ್ಗ:ತಾ

ತರಗತಿ:2 ವಿಷಯ : ಕನ್ನಡ ಮಾರ್ಗದರ್ಶಕರು:ಶ್ರೀ ಸೋಮಲಿಂಗಪ್ಪ ಜೆ

ಹೆಸರು:

# ಚಿನ್ನದ ಮೊಟ್ಟೆ ಇಡುವ ಕೋಳಿ

ವಿದ್ಯಾರ್ಥಿ ಹೆಸರು : ______________________ ತರಗತಿ :________ ದಿನಾಂಕ : .

1) ಕಥೆಯನ್ನು ಹಿರಿಯರ ಸಹಾಯ ಪಡೆದು ಹೇಳಲು ಪ್ರಯತ್ನಿಸು.

ಒಬ್ಬ ರೈತನಿದ್ದ. ಅವನು ಒಂದು ಕೋಳಿ ಸಾಕಿದ್ದ. ಅದು ಬೆಳೆದು ದೊಡ್ಡದಾಯ್ತು. ಅವನ ಅದೃಷ್ಟಕ್ಕೆ ಆ ಕೋಳಿ ದಿನಾ ಒಂದು ಚಿನ್ನದ ಮೊಟ್ಟೆ ಇಡತೊಡಗಿತು. ಅದನ್ನು ಮಾರಿ ಅವನು ಜೀವನ ಸಾಗಿಸುತ್ತಿದ್ದನು.





ಒಂದು ದಿನ ಅವನಿಗೆ ಒಂದು ಕೆಟ್ಟ ಆಲೋಚನೆ ಬಂತು. ದಿನಾ ಮೊಟ್ಟೆ ಮಾರಿ ಜೀವಿಸುವುದು ಬೇಸರವೆನಿಸಿತು. ಕೋಳಿಯ ಹೊಟ್ಟೆ ಕೊಯ್ದರೆ ಎಲ್ಲಾ ಚಿನ್ನದ ಮೊಟ್ಟೆಗಳೂ ಒಟ್ಟಿಗೆ ಸಿಗುತ್ತವೆ ಎನಿಸಿತು. ಕೊಯ್ದು ನೋಡುತ್ತಾನೆ....!

ಮಾಂಸ, ಕರಳು ಬಿಟ್ಟು ಅಲ್ಲೇನಿದೆ? ಕೋಳಿಯೂ ಹೋಯಿತು, ಚಿನ್ನದ ಮೊಟ್ಟೆಯೂ ಹೋಯಿತು.



ಮಾರ್ಗದರ್ಶಕರಿಗೆ ಸೂಚನೆ: ಮೇಲಿನ ಕಥೆಯನ್ನು ಸೂಕ್ತ ಹಾವಭಾವದೊಂದಿಗೆ ಮಕ್ಕಳಿಗೆ ಹೇಳಿಕೊಡುವುದು. ನಂತರ QR ಕೋಡ್ ಅನ್ನು ಮೊಬೈಲ್ ನಿಂದ ಸ್ಕ್ಯಾನ್ ಮಾಡಿ ಮಕ್ಕಳಿಗೆ ಕೇಳಿಸುವುದು.



LIVEWORKSHEETS